ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Thursday, the 24th January, 1980, Magha 4, 1901 S.E.

The House met in the Assembly Chamber, Vidhana Soudha at Ten of the Clock.

[MR. SPEAKER (SRI P. VENKATARAMANA) in the Chair.]

SPEAKERS REPORT

MR. SPEAKER.— I lay on the Table of the House a copy of the Address delivered by the Governor on 23rd January, 1980.

Governer's Speech

ಮಾನ್ಯ ಸಭಾಪತಿಯವರೇ, ಅಧ್ಯಕ್ಷರೇ ಮತ್ತು ವಿಧಾನಮಂಡಲದ ಸದಸ್ಯರೇ,

ಹೊಸವರ್ಷದ ಮೊದಲನೆಯ ಈ ಅಧಿವೇಶನಕ್ಕೆ ನಿಮ್ಮೆಲ್ಲರನ್ನೂ ಸ್ವಾಗತಿಸಲು ನನಗೆ ಸಂತೋಷವಾಗಿದೆ. ಹೊಸದಾಗಿ ಚುನಾಯಿತರಾಗಿ ಬಂದಿರುವವರಿಗೆ ವಿಶೇಷವಾಗಿ ಸ್ವಾಗತ ಬಯಸುತ್ತೇನೆ.

ದೇಶವನ್ನು ಚಕಿತಗೊಳಿಸುವ ಬದಲಾವಣೆಗಳಂ ಸಂಭವಿಸಿದ ತರುವಾಯ ನಾವು ಇಲ್ಲಿ ಸಭೆ ಸೇರಿದ್ದೇವೆ. ಜನತೆ ಮತದಾನದ ಮೂಲಕ ಎರಡನೆಯ ಬಾರಿ ಶಾಂತರೀತಿಯಲ್ಲಿ ಕೇಂದ್ರ ಸರ್ಕಾರವನ್ನು ಬದಲಾಯಿಸಿರುವುದು, ರಾಷ್ಟ್ರದಲ್ಲಿ ಪ್ರಜಾತಂತ್ರವು ಬೇರೂರಿರುವುದಕ್ಕೆ ನಿದರ್ಶನ. ಸುಮಾರು ಹಿಹಿ ತಿಂಗಳುಗಳಷ್ಟು ಕಾಲ ಅಧಿಕಾರದಿಂದ ಹೊರಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ಈಗ ಪ್ರಚಂಡ ಬಹುಮತದಿಂದ ಕೇಂದ್ರದಲ್ಲಿ ಪುನಃ ಪ್ರಧಾನ ಮಂತ್ರಿಯಾಗಿ ಅಧಿಕಾರಕ್ಕೆ ಬಂದಿದ್ದಾರೆ. ಲೋಕಸಭಾ ಚುನಾವಣೆಗಳ ಫಲಿತಾಂಶದಿಂದಾಗಿ ನಮ್ಮ ರಾಜ್ಯದ ಸರ್ಕಾರದಲ್ಲಿಯೂ ಬದಲಾವಣೆಯುಂಟಾಗಿ ಈಗ ಕಾಂಗ್ರೆಸ್ (ಐ) ಪಕ್ಷವು ಸರ್ಕಾರವನ್ನು ರಚಿಸಿದೆ.

My Government have accorded the highest priority to bringing down the prices of essential commodities like food grains, sugar, vegetable oil and kerosene, which during the last few months, unfortunately, showed a sudden rise. They are also committed to seeing that essential commodities are available to people throughout the State, whether they live in cities, towns or villages.

My Government are concerned about the need to ensure an adequate supply of potable water, both in rural and urban areas. They appreciate the right of the people of the State to enjoy an adequate supply of protected drinking water as one of their formost needs. We will be concentrating, therefore, on seeing that more borewells are sunk in village areas, even in those which are not included in the Minimum Needs Programme. We will also be paying

special attention to the problems of towns and cities which now are not getting an adequate supply of drinking water on account of the inability of the Municipalities to manage their water supply schemes owing to financial and administrative problems. As a first step in this direction, we are proposing to take over, from the Municipalities, the maintenance and development of the water supply schemes in the eight cities of Bellary, Gulbarga, K. G. F., Chitradurga, Tumkur, Hospet, Arasikere and Bhadravathi. The Karnataka Urban Water Supply and Drainage Board will be entrusted with the running of these schemes and will maintain them on the pattern of the Bangalore Water Supply and Sewerage Board. The Bangalore Water Supply and Sewerage Board has embarked upon the scheme (the II Stage of the Cauvery Water Supply Scheme) which is estimated to cost Rs. 56 Crores and has obtained a loan of Rs. 20.00 Crores from the Life Insurance Corporation of India for this purpose. This will mean that Bangalore City will be able to get another 30 million gallons of water per day by 1982-83.

My Government are committed to, not only continuing the existing programme of housing for the poor, but also to seeing that it is stepped up. The details of the programme for housing and for giving sites both in the rural areas and in the urban areas will be spelt out by my Finance Minister in his Budget Speech.

My Government are aware of the menace caused by the increasing trend towards the formation of slums in Bangalore City and some of the other cities in the State. They propose to pay special attention to problems created by the more than one hundred and fifty slums in the City; but efforts will also be made to ensure that persons affected in our slum clearance programme are adequately rehabilitated elsewhere. This will form part of a comprehensive integrated approach to redeveloping the area.

My Government have noted with concern the difficulties that commuters in Bangalore City and throughout the State are facing on account of the inadequate facilities provided by the Road Transport Corporation and the Bangalore Transport Service. We are working out a special programme to augment the fleet of the Road Transport Corporation. Apart from this, we are committed to seeing that the quality of service given by the Road Transport Corporation is improved. We will endeavour to reduce the traffic congestion in Bangalore City by developing the ring road and by requesting the Government of India to develop the circular railway. In spite of these steps, we feel it would be difficult to contain the problem of Bangalore City, unless steps are taken to ensure that new indusrial

enterprises are located well out of the city. My Government is working on a scheme to ensure this.

My Government have been investing, over the years, quite heavily on the development of industry in the State. Although a large number of industries has come up in the State in the past few years, it is unfortunate that the State's investment in industry has been directed more towards bolstering up and strengthening existing Government Companies. My Government are anxious to ensure that investment in industry is stepped up so as to promote and generate a lot of fresh investment through other agencies, with particular reference to the need to create more employment opportunites. One major bottleneck has been the shortage of power. Steps have been taken to lay the foundation for much greater generation of electrical energy. With the construction of the Bommanahalli Pick up and the Nagjari Power House of the Kali Project, we now have the benefit of run-of-the-river generation. My Government are anxious to see that the Kali Project is completed speedily. The President of India, a few days ago, laid the foundation stone for our first Thermal Project, which we are planning at Raichur. The massive investment needed for these power projects has always presented a problem, but my Government will take all steps to see that they are completed as rapidly as possible. We are also confident that the Central Government will fully appreciate our difficulties and will help us to implement these projects quickly.

World Bank assistance has been obtained for the Upper Krishna Project, which, when completed, will irrigate about two million acres. It will be one of the largest projects in the country and the time span for completing the first phase is five years. So far, the project has been running on schedule and my Government are anxious to ensure that the first phase is not only completed quickly, but that the second phase is also taken up on time.

We are also anxious to see that the projects in the Cauvery Basin, viz., Hemavathy, Harangi, Kabini Projects and the Right Bank Canal of the Krishnaraja Sagar Dam as also the modernisation of the Visweswaraiah Canal are completed early. The enormous investment put into major and medium irrigation during the past few years would be wasted, if prompt and timely action for command area development is not taken up. You have, before you, a Bill to replace the Ordinance in accordance with which statutory authorities were set up for the proper development of the command areas.

Minor irrigation also merits special attention. It can be taken up in areas where schemes under major irrigation project cannot be

had. My Government are anxious to see that on-going minor irrigation works are completed quickly and that, wherever necessary fresh works are taken up

There has been substantial progress in the implementation of Land Reforms. My Government are committed to a fuller and more effective implementation of this programme, if necessary, by the creation of more Land Tribunals in districts where the implementation of the programme needs to be quickened.

My Government will continue to implement the 20-Point Economic Programme but more vigorously than before; they will pay special attention to the distribution of surplus lands and will also ensure that the ownership rights are conferred on the grantees expeditiously. My Government are keen on removing the bottlenecks in implementing the legislation on Urban Land Ceiling by rationalising the scheme and by enforcing theprovisions under the Act strictly.

Though our State is ahead of many other states in providing roads and bridges to link villages, towns and cities, there has been a slowing down in the programme to improve the quality of these roads, primarily owing to a paucity of funds. My Government will give particular attention to improving the quality of our roads and to the construction of bridges, wherever necessary.

We are keen to have all the major railway lines in our State converted to broad guage. Though work on the Bangalore-Guntakal line has been taken up, it needs to be stepped up. Work on converting the Bangalore-Mysore line to broad guage must be taken up quickly. We will press our claim with the Government of India that they take up on a priority basis, the conversion of the Bangalore-Miraj railway line to broad guage.

Unfortunately, there has been a serious set back in the commencement of work on the Vijayanagar Steel Plant. My Government attach considerable importance to this vital project and will urge the Government of India to commence work on it without further loss of time.

Though we have expanded the provision of schooling facilities for all children in the State, there are many children in the compulsory education age-group who are not enrolled in our schools. My Government will pay special attention to this problem and will take steps to achieve 100 per cent enrolment in the compulsory education age-group. My Government will also intensify efforts to vocationalise education to achieve the twin objectives of training educated youth for gainful employment and reducing the unnecessary pressure on admission to Colleges.

My Government are anxious to encourage the talented youth, particularly in the rural areas, in games and sports; they will formulate schemes that would provide more and more facilities in this direction.

During the past few years, steps have been taken to release bonded labour from the serfdom to which they have been subjected all these years. Unfortunately, we could not make much progress in rehabilitating these labourers released from bondage. My Government are working out schemes to ensure that such released bonded labour are effectively rehabilitated and that they are enabled to contribute freely towards the nation's economic growth.

Karnataka has always given a lead in paying special attention to Scheduled Castes, Scheduled Tribes, Backward Classes, Minorities and other weaker sections of Society. The existing schemes will not only be continued, but also strengthened.

My Government is concerned about the welfare of Government employees. In recent years several measures have been taken to provide better scales of pay and also to provide certain amenities. One of the major demands of the the Government employees has been to provide them with housing, particularly in the rural areas. My Government propose to take up an extensive programme of providing housing to low paid employees who are posted to work in different parts of the State. We will prepare a comprehensive scheme to take up this work according to a phased programme

ಆಡಳಿತ ಹಾಗೂ ಜನತೆಯ ನಡುವೆ ಇನ್ನಷ್ಟು ನಿಕಟ ಹಾಗೂ ಮಧುರ ಬಾಂಧವ್ಯವನ್ನು ಏರ್ಪಡಿಸುವ ಸಲುವಾಗಿ ಸರ್ಕಾರದ ಎಲ್ಲ ಮಟ್ಟಗಳಲ್ಲೂ ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೆ ತರಲಾಗಿದೆ. ಸರಕಾರದ ಈ ನಿರ್ಣಯವನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಸಲುವಾಗಿ ಈಗಾಗಲೇ ಕೆಲವು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ನಮ್ಮ ಕಚೇರಿಗಳಲ್ಲಿ ವ್ಯಾಪಕವಾಗಿ ಕನ್ನಡದ ಬಳಕೆಯಾಗಬೇಕಾದರೆ ನಾವು ಇನ್ನೂ ಹಲವಾರು ಕಾರ್ಯಕ್ರಮಗಳನ್ನು ಕೈಕೊಳ್ಳುವುದು ಅಗತ್ಯ. ರಾಜ್ಯ ಸರ್ಕಾರದ ಎಲ್ಲ ಕಚೇರಿಗಳಲ್ಲೂ ಹೆಚ್ಚು ಹೆಚ್ಚಾಗಿ ಕನ್ನಡದ ಬಳಕೆಯಾಗುವಂತೆ ಮಾಡಲು ನಮ್ಮ ಸರ್ಕಾರ ತೀವ್ರ ಕ್ರಮಗಳನ್ನು ಕೈಕೊಳ್ಳಲಿದೆ

ಕಳೆದ ಸಲದ ಶಾಸನಸಭೆಯ ಅಧಿವೇಶನದ ನಂತರ ಈ ಮುಂದಿನ ಅಧ್ಯಾದೇಶಗಳನ್ನು ಹೊರಡಿಸಲಾಗಿದೆ.

(1) The Karnataka Motor Vehicles Taxation (Third Amendment) Ordinance, 1979.

(2) The Karnataka Lokayukta (Amendment) Ordinance, 1979.

(3) The Karnataka Lokayukta (Repeal) Ordinance, 1979.

(4) The Karnataka Lokayukta (Second) Ordinance, 1979.

(5) The Karnataka Vacant Lands in Urban Areas (Prohibition of Alienation) (Amendment) (Repeal) Ordinance, 1979.

(6) The Karnataka Agricultural Produce Marketing (Regulation) (Amendment) Ordinance, 1979.

(7) The Karnataka Vacant Lands in Urban Areas (Prohibtion) of Alienation) (Second Amendment) Ordinance, 1979.

(8) The Karnataka Agricultural Produce Marketing (Regulation) (Second Amendment) Ordinance, 1979,

(9) The Mangalore Port Trust (Repeal) Ordinance, 1979.

(10) The Karnataka Village Panchayats and Local Boards (Amendment) Ordinance, 1979.

(11) The Karnataka Debt Relief Ordinance, 1979.

(12) The Karnataka Co-operative Societies (Second Amendment) Ordinance, 1979.

(13) The Karnataka Command Areas Development (Second) Ordinance, 1979.

(14) The Karnataka Stamp (Second Amendment) Ordinance, 1979.

(15) The Karnataka Land Revenue (Amendment) Ordinance, 1979.

(16) The Karnataka Silkworm Seed, Cocoon and Silk Yarn (Second Amendment) Ordinance, 1979.

(17) The Karnataka Land Reforms (Second Amendment) Ordinance, 1979.

(18) The Mangalore Port Trust (Repeal) (Amendment) Ordinance, 1979.

ಈ ಆಧ್ಯಾದೇಶಗಳನ್ನು ವಿಧಾನ ಮಂಡಲದ ಮುಂದೆ ಇಡಲಾಗುವುದು. ಅವಶ್ಯವೆನಿಸಿದಾಗ, ಈ ಆಧ್ಯಾದೇಶಗಳ ಬದಲಾಗಿ ವಿಧೇಯಕಗಳನ್ನು ಆದಷ್ಟು ಬೇಗನೆ ವಿಧಾನ ಮಂಡಲದ ಮುಂದೆ ಮಂಡಿಸಲು ನಮ್ಮ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ರಾಜ್ಯದ ಜನತೆ ನಿಮ್ಮಲ್ಲಿ ಅಪಾರ ವಿಶ್ವಾಸ ಮತ್ತು ನಂಬಿಕೆಯನ್ನು ವ್ಯಕ್ತಪಡಿಸಿದ್ದಾರೆಂಬುದನ್ನು ಮತ್ತು ನಿಮ್ಮಿಂದ ಅವರು ಹೆಚ್ಚಿನ ಕಾರ್ಯ ತತ್ಪರತೆಯನ್ನು ನಿರೀಕ್ಷಿಸುತ್ತಾರೆ ಎಂಬುದನ್ನು ನಿಮಗೆ ನಾನು ಪುನಃ ಹೇಳಬೇಕಾಗಿಲ್ಲ. ನಿಮ್ಮ ಅತ್ಯಮೂಲ್ಯ ಸಮಯದ ಪ್ರತಿಯೊಂದು ನಿಮಿಷವನ್ನೂ ಜನತೆಯ ಅನುಕೂಲಕ್ಕಾಗಿ ರಚನಾತ್ಮಕವಾಗಿ ವಿನಿಯೋಗಿಸಬೇಕೆಂಬ ಗುರುತರ ಜವಾಬ್ದಾರಿಯ ಅರಿವು ನಿಮಗೆ ಇದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ, ತಿಳಿವಳಿಕೆ ಮತ್ತು ಸದ್ವಿವೇಕಗಳು ನಿಮ್ಮ ಪ್ರತಿ ಯೊಂದು ಚಿಂತನೆಯಲ್ಲಿ ನಿಮಗೆ ಸೂಕ್ತ ಮಾರ್ಗದರ್ಶನ ನೀಡಲಿ. ನಿಮ್ಮ ಸಕಲ ಪ್ರಯತ್ನಗಳಲ್ಲಿ ನಿಮಗೆ ಯಶಸ್ಸು ಲಭಿಸಲಿ ಎಂದು ಹಾರೈಸುತ್ತೇನೆ.

ಜೈ ಕರ್ನಾಟಕ, ಜೈಹಿಂದ್

ರಾಜ್ಯಪಾಲರು ಮಾಡಿದ ಭಾಷಣದ ಕನ್ನಡ ಭಾಷಾಂತರ

ಮಾನ್ಯ ಸಭಾಪತಿಯವರೇ, ಅಧ್ಯಕ್ಷರೇ ಮತ್ತು ವಿಧಾನಮಂಡಲದ ಸದಸ್ಯರೇ

ಹೊಸವರ್ಷದ ಮೊದಲನೆಯ ಈ ಅಧಿವೇಶನಕ್ಕೆ ನಿಮ್ಮೆಲ್ಲರನ್ನೂ ಸ್ವಾಗತಿಸಲು ನನಗೆ ಸಂತೋಷವಾಗುತ್ತದೆ. ಹೊಸದಾಗಿ ಚುನಾಯಿತರಾಗಿ ಬಂದವರಿಗೆ ವಿಶೇಷವಾಗಿ ಸ್ವಾಗತ ಬಯಸುತ್ತೇನೆ.

ದೇಶವನ್ನು ಚಕಿತಗೊಳಿಸುವ ಬದಲಾವಣೆಗಳು ಸಂಭವಿಸಿದ ತರುವಾಯ ನಾವು ಇಲ್ಲಿ ಸಭೆ ಸೇರಿದ್ದೇವೆ. ಜನತೆ ಮತದಾನದ ಮೂಲಕ ಎರಡನೆಯ ಬಾರಿ ಶಾಂತರೀತಿಯಲ್ಲಿ ಕೇಂದ್ರ ಸರ್ಕಾರವನ್ನು ಬದಲಾಯಿಸಿರುವುದು ರಾಷ್ಟ್ರದಲ್ಲಿ ಪ್ರಜಾತಂತ್ರವು ಬೇರೂರಿರುವುದಕ್ಕೆ ನಿದರ್ಶನ. ಸುಮಾರು ೩೫ ತಿಂಗಳುಗಳಷ್ಟು ಕಾಲ ಅಧಿಕಾರದಿಂದ ಹೊರಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ಈಗ ಪ್ರಚಂಡ ಬಹುಮತದಿಂದ ಕೇಂದ್ರದಲ್ಲಿ ಪುನಃ ಪ್ರಧಾನ ಮಂತ್ರಿಯಾಗಿ ಅಧಿಕಾರಕ್ಕೆ ಬಂದಿದ್ದಾರೆ. ಲೋಕಸಭಾ ಚುನಾವಣೆಗಳ ಫಲಿತಾಂಶದಿಂದಾಗಿ ನಮ್ಮ ರಾಜ್ಯದ ಸರ್ಕಾರದಲ್ಲಿಯೂ ಬದಲಾವಣೆಯುಂಟಾಗಿ ಈಗ ಕಾಂಗ್ರೆಸ್ (ಐ) ಪಕ್ಷವು ಸರ್ಕಾರವನ್ನು ರಚಿಸಿದೆ.

ದುರದೃಷ್ಟವಶಾತ್ ಕಳೆದ ಕೆಲವು ತಿಂಗಳುಗಳಿಂದ ಒಮ್ಮಿಂದೊಮ್ಮೆಗೇ ಗಗನಕ್ಕೇರಿದ ಆಹಾರ ಧಾನ್ಯಗಳು, ಸಕ್ಕರೆ, ವನಸ್ಪತಿ ಮತ್ತು ಸೀಮೆಎಣ್ಣೆಯೇ ಮೊದಲಾದ ಅತ್ಯಾವಶ್ಯಕ ವಸ್ತುಗಳ ಬೆಲೆಯನ್ನು ಇಳಿಸುವುದಕ್ಕೆ ನಮ್ಮ ಸರ್ಕಾರವು ಅತ್ಯಂತ ಹೆಚ್ಚಿನ ಆದ್ಯತೆಯನ್ನು ನೀಡುವುದು. ರಾಜ್ಯಾದ್ಯಂತ ಜನತೆಗೆ ನಗರಗಳಲ್ಲಿ, ಪಟ್ಟಣಗಳಲ್ಲಿ ಅಥವಾ ಗ್ರಾಮಗಳಲ್ಲಿ ಅತ್ಯಾವಶ್ಯಕ ವಸ್ತುಗಳು ದೊರಕುವಂತೆ ಮಾಡುವ ದಿಸೆಯಲ್ಲಿ ನಮ್ಮ ಸರ್ಕಾರವು ಸರ್ವಪ್ರಯತ್ನವನ್ನು ಮಾಡುತ್ತದೆ.

ಗ್ರಾಮಾಂತರ ಮತ್ತು ನಗರ ಪ್ರದೇಶಗಳಿಗೆ ಕುಡಿಯುವ ನೀರನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸುವ ಅಗತ್ಯದ ಬಗ್ಗೆ ನಮ್ಮ ಸರ್ಕಾರವು ಆಸಕ್ತಿ ವಹಿಸುತ್ತಿದೆ. ರಾಜ್ಯದ ಜನತೆಯ ಅತ್ಯಾವಶ್ಯಕತೆಗಳಲ್ಲೊಂದಾದ ಕುಡಿಯುವ ನೀರಿನ ಪೂರೈಕೆಯನ್ನು ಸಾಕಷ್ಟು ಪ್ರಮಾಣದಲ್ಲಿ ಮಾಡಬೇಕೆನ್ನುವ ಅವರ ಬೇಡಿಕೆ ಸಮಂಜಸವಾದುದೆಂಬುದನ್ನು ನಾವು ಮನಗಂಡಿದ್ದೇವೆ. ಆದ್ದರಿಂದ ಕನಿಷ್ಠ ಅವಶ್ಯಕತೆಗಳ ಪೂರೈಕೆ ಯೋಜನೆಯು ಅನ್ವಯವಾಗದಿರುವ ಪ್ರದೇಶಗಳೂ ಸೇರಿದಂತೆ ಗ್ರಾಮಾಂತರ ಪ್ರದೇಶಗಳಲ್ಲಿ ಕೊರೆಬಾವಿಗಳನ್ನು ತೆಗೆಡುವುದರ ಕಡೆಗೆ ವಿಶೇಷ ಗಮನ ನೀಡುತ್ತೇವೆ. ನಗರ ಮತ್ತು ಪಟ್ಟಣಗಳಲ್ಲಿ ಕುಡಿಯುವ ನೀರು ಪೂರೈಕೆಯ ಜವಾಬ್ದಾರಿ ಹೊತ್ತಿರುವ ಪುರಸಭೆಗಳು ಆರ್ಥಿಕ ಹಾಗೂ ಅಧಿಕೃತ ಸಂಬಂಧದ ಸಮಸ್ಯೆಗಳಿಂದಾಗಿ ಈ ಯೋಜನೆಯನ್ನು ಸಮರ್ಪಕವಾಗಿ ನಿರ್ವಹಿಸುವುದು ಕಷ್ಟ ಸಾಧ್ಯವಾಗಿದ್ದು, ಅದರಿಂದಾಗಿ ಸಾಕಷ್ಟು ಪ್ರಮಾಣದಲ್ಲಿ ಕುಡಿಯುವ ನೀರನ್ನು ಸರಬರಾಜು ಮಾಡದಿರುವುದನ್ನು ನಾವು ಗಮನಿಸಿದ್ದೇವೆ. ಈ ದಿಶೆಯಲ್ಲಿ ಮೊದಲ ಹೆಜ್ಜೆಯಾಗಿ ಬಳ್ಳಾರಿ, ಗುಲ್ಬರ್ಗ, ಕೆ. ಜಿ. ಎಫ್., ಚಿತ್ರದುರ್ಗ, ತರೀಕೆರೆ, ಹೊಸಪೇಟೆ, ಅರಸೀಕೆರೆ ಮತ್ತು ಭದ್ರಾವತಿ ಈ ಎಂಟು ನಗರಗಳಲ್ಲಿ ನೀರು ಪೂರೈಕೆ ಯೋಜನೆಗಳ ನಿರ್ವಹಣೆ ಮತ್ತು ಅಭಿವೃದ್ಧಿ ಕಾರ್ಯವನ್ನು ಪುರಸಭೆಗಳಿಂದ ನಾವು ವಹಿಸಿಕೊಳ್ಳಲು ಉದ್ದೇಶಿಸಿದ್ದೇವೆ. ಈ ಯೋಜನೆಗಳ ನಿರ್ವಹಣೆಯನ್ನು ಕರ್ನಾಟಕ ನಗರ ಪ್ರದೇಶಗಳ ನೀರು ಪೂರೈಕೆ ಮತ್ತು ಒಳಚರಂಡಿ ಮಂಡಲಿಗೆ ವಹಿಸಿಕೊಡಲಾಗುವುದು ಮತ್ತು ಮಂಡಲಿಯು ಬೆಂಗಳೂರು ನೀರು ಪೂರೈಕೆ ಮತ್ತು ಒಳಚರಂಡಿ ಮಂಡಲಿಯ ಕಾರ್ಯನಿರ್ವಹಣೆಯ ಮಾದರಿಯಲ್ಲಿ ಈ ಕಾರ್ಯವನ್ನು ನಿರ್ವಹಿಸುವುದು. ಬೆಂಗಳೂರು ನೀರು ಪೂರೈಕೆ ಮತ್ತು ಒಳಚರಂಡಿ ಮಂಡಲಿಯು ೫೬ ಕೋಟಿ ರೂಪಾಯಿಗಳ ಅಂದಾಜು ವೆಚ್ಚದ ಈ ಯೋಜನೆಯನ್ನು (ಕಾವೇರಿ ನೀರು ಪೂರೈಕೆ ಯೋಜನೆಯ IIನೇ ಹಂತ) ಪ್ರಾರಂಭಿಸಿದ್ದು, ಇದಕ್ಕಾಗಿ ಭಾರತದ ಜೀವವಿಮಾ ನಿಗಮದಿಂದ ೨೦ ಕೋಟಿ ರೂಪಾಯಿಗಳ ಸಾಲವನ್ನು ಪಡೆದಿದೆ. ಈ ಯೋಜನೆಯು ಕಾರ್ಯಗತವಾದಾಗ, ೧೯೮೨-೮೩ರ ವೇಳೆಗೆ ಬೆಂಗಳೂರು ನಗರವು ದಿನವೊಂದಕ್ಕೆ ೩೦ ಮಿಲಿಯ ಗ್ಯಾಲನುಗಳಷ್ಟು ಹೆಚ್ಚು ನೀರನ್ನು ಪಡೆಯಲು ಸಾಧ್ಯವಾಗುವುದು.

ಬಡವರಿಗಾಗಿ ಗೃಹನಿರ್ಮಾಣದ ಪ್ರಸ್ತುತ ಯೋಜನೆಯನ್ನು ಮುಂದುವರಿಸುವುದೇ ಅಲ್ಲದೆ ಅದನ್ನು ತೀವ್ರಗೊಳಿಸುವ ಕಾರ್ಯಕ್ಕೆ ನಮ್ಮ ಸರ್ಕಾರವು ಬದ್ಧವಾಗಿದೆ. ಗ್ರಾಮಾಂತರ ಮತ್ತು ನಗರ ಪ್ರದೇಶಗಳಲ್ಲಿ ಗೃಹನಿರ್ಮಾಣ ಹಾಗೂ ಮನೆ ನಿವೇಶನಗಳನ್ನು ನೀಡುವ ಯೋಜನೆಗಳ ವಿವರಗಳನ್ನು ನಮ್ಮ ಹಣಕಾಸು ಸಚಿವರು ತಮ್ಮ ಬಜೆಟ್ ಭಾಷಣದಲ್ಲಿ ನೀಡಲಿದ್ದಾರೆ.

ಬೆಂಗಳೂರು ನಗರ ಮತ್ತು ರಾಜ್ಯದ ಇತರ ಕೆಲವು ನಗರಗಳಲ್ಲಿ ಹೆಚ್ಚುತ್ತಿರುವ ಕೊಳಚೆ ಪ್ರದೇಶಗಳಿಂದಾಗಿ ಉದ್ಭವಿಸುವ ಅಪಾಯಗಳ ಅರಿವು ನಮ್ಮ ಸರ್ಕಾರಕ್ಕಿದೆ. ನಗರದಲ್ಲಿರುವ ನೂರೈವತ್ತಕ್ಕೂ ಹೆಚ್ಚಿನ ಕೊಳಚೆ ಪ್ರದೇಶಗಳಿಂದ ಉಂಟಾಗಿರುವ ಸಮಸ್ಯೆಗಳ ಬಗ್ಗೆ ವಿಶೇಷ ಗಮನ ನೀಡಲು ಅವರು ಉದ್ದೇಶಿಸಿದ್ದಾರೆ. ಆದರೆ ಕೊಳಚೆ ನಿರ್ಮೂಲನಾ ಕಾರ್ಯಯೋಜನೆಯಿಂದ ಬಾಧಿತರಾಗುವ ವ್ಯಕ್ತಿಗಳಿಗೆ ಬೇರೆಲ್ಲಾದರೂ ಸಮರ್ಪಕವಾದ ರೀತಿಯಲ್ಲಿ ಪುನರ್ವಸತಿ ಒದಗಿಸುವ ಬಗ್ಗೆ ಸರ್ವ ಪ್ರಯತ್ನವನ್ನೂ ಮಾಡಲಾಗುವುದು. ಇದು ಆ ಪ್ರದೇಶವನ್ನು ಪುನರ್ ಅಭಿವೃದ್ಧಿಗೊಳಿಸುವ ಬಗ್ಗೆ ಕೈಕೊಂಡ ವ್ಯಾಪಕವೂ ಸಂಘಟಿತವೂ ಆದ ಯೋಜನೆಯ ಒಂದು ಭಾಗವಾಗುತ್ತದೆ.

ರಸ್ತೆ ಸಾರಿಗೆ ನಿಗಮ ಮತ್ತು ಬೆಂಗಳೂರು ಸಾರಿಗೆ ಸಂಸ್ಥೆಯು ಒದಗಿಸುತ್ತಿರುವ ಸಾರಿಗೆ ಸೌಲಭ್ಯದ ಕೊರತೆಯ ನಿಮಿತ್ತ ಬೆಂಗಳೂರು ನಗರದಲ್ಲಿ ಮತ್ತು ರಾಜ್ಯದಾದ್ಯಂತ ಪ್ರಯಾಣ ಮಾಡುವವರು ಅನುಭವಿಸುತ್ತಿರುವ ತೊಂದರೆಗಳನ್ನು ನಮ್ಮ ಸರ್ಕಾರವು ಗಮನಿಸಿದೆ. ರಸ್ತೆ ಸಾರಿಗೆ ನಿಗಮದ ವಾಹನಗಳ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ ವಿಶೇಷ ಕಾರ್ಯಕ್ರಮವೊಂದನ್ನು ರೂಪಿಸಲಾಗುತ್ತಿದೆ. ಇದಲ್ಲದೆ, ರಸ್ತೆ ಸಾರಿಗೆ ನಿಗಮವು ಈಗ ಒದಗಿಸುವ ಸೇವೆಯ ಗುಣಮಟ್ಟವನ್ನು ಉತ್ತಮಗೊಳಿಸುವ ಬಗ್ಗೆಯೂ ಕ್ರಮ ಕೈಕೊಳ್ಳಲಾಗುತ್ತದೆ. ಬೆಂಗಳೂರು ನಗರದಲ್ಲಿ ವರ್ತುಲಾಕಾರದ ರಸ್ತೆಯನ್ನು ಅಭಿವೃದ್ಧಿಪಡಿಸುವ ಮೂಲಕ ಮತ್ತು ವರ್ತುಲಾಕಾರದ ರೈಲುಮಾರ್ಗವನ್ನು ಅಭಿವೃದ್ಧಿಗೊಳಿಸುವಂತೆ ಭಾರತ ಸರ್ಕಾರವನ್ನು ಕೋರುವ ಮೂಲಕ ಸಂಚಾರದ ಒತ್ತಡವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತೇವೆ. ಈ ಎಲ್ಲ ಕ್ರಮಗಳನ್ನು ಕೈಗೊಂಡರೂ ಸಹ, ಹೊಸ ಕೈಗಾರಿಕಾ ಸಂಸ್ಥೆಗಳನ್ನು ನಗರದಿಂದ ಆಚೆ ಸ್ಥಾಪಿಸಲು ಕ್ರಮಗಳನ್ನು ಕೈಗೊಂಡ ಹೊರತು ಬೆಂಗಳೂರು ನಗರದ ಸಾರಿಗೆ ಸಮಸ್ಯೆಯನ್ನು ನಿವಾರಿಸಲು ಕಷ್ಟ ಸಾಧ್ಯವೆಂದು ತೋರುತ್ತದೆ. ಈ ಬಗ್ಗೆ ನಮ್ಮ ಸರ್ಕಾರವು ಯೋಜನೆಯೊಂದನ್ನು ರೂಪಿಸುತ್ತಿದೆ.

ಹಲವು ವರ್ಷಗಳಿಂದ ರಾಜ್ಯದಲ್ಲಿ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಲು ನಮ್ಮ ಸರ್ಕಾರವು ಭಾರೀ ಮೊತ್ತದ ಹಣವನ್ನು ವಿನಿಯೋಗಿಸುತ್ತಿದೆ, ಹಿಂದಿನ ಕೆಲವು ವರ್ಷಗಳಲ್ಲಿ. ಅನೇಕ ಕೈಗಾರಿಕೆಗಳು ಸ್ಥಾಪಿತವಾಗಿದ್ದರೂ ಈಗಿರುವ ಸರ್ಕಾರೀ ಕಂಪನಿಗಳನ್ನೇ ಪ್ರೋತ್ಸಾಹಿಸುವ ಮತ್ತು ವೃದ್ಧಿಪಡಿಸುವ ಬಗ್ಗೆಯೇ ಸರ್ಕಾರದ ಹೆಚ್ಚು ಹಣ ವಿನಿಯೋಗವಾಗುತ್ತಿರುವುದು ದೌರ್ಭಾಗ್ಯದ ಸಂಗತಿ. ಹೆಚ್ಚು ಉದ್ಯೋಗಾವಕಾಶಗಳನ್ನು ಕಲ್ಪಿಸುವ ಅಗತ್ಯವನ್ನು ಮನಗಂಡ ನಮ್ಮ ಸರ್ಕಾರವು ಇತರ ಏಜೆನ್ಸಿಗಳೂ ಸಹ ಧನವಿನಿಯೋಗ ಮಾಡಲು ಪ್ರೋತ್ಸಾಹ ನೀಡುವ ಸಲುವಾಗಿ ಕೈಗಾರಿಕೆಗಳಲ್ಲಿ ತಾನು ಹೂಡುವ ಬಂಡವಾಳದ ಪ್ರಮಾಣವನ್ನು ಹೆಚ್ಚಿಸಲು ಕಾತರದಿಂದಿದೆ. ವಿದ್ಯುತ್ತಿನ ಕೊರತೆಯು ಒಂದು ಪ್ರಮುಖ ಅಡಚಣೆಯಾಗಿದೆ. ವಿದ್ಯುಚ್ಛಕ್ತಿಯನ್ನು ಅತಿ ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಲು ಅಗತ್ಯ ಕ್ರಮಕೈಗೊಳ್ಳಲಾಗಿದೆ. ಬೊಮ್ಮನಹಳ್ಳಿ ಪಿಕ್‌ಅಪ್ ಮತ್ತು ಕಾಳಿ ಯೋಜನೆಯ ನಾಗಝರಿ ವಿದ್ಯುದಾಗಾರದ ನಿರ್ಮಾಣದಿಂದಾಗಿ ಈಗ ನಮಗೆ ನದಿ ನೀರಿನಿಂದ ವಿದ್ಯುತ್ತಿನ ಸೌಲಭ್ಯವೂ ದೊರೆಯುತ್ತಿದೆ. ಕಾಳಿ ಯೋಜನೆಯನ್ನು ಪೂರ್ಣಗೊಳಿಸಲು ನಮ್ಮ ಸರ್ಕಾರ ಕಾತರವಾಗಿದೆ. ರಾಯಚೂರಿನಲ್ಲಿ ಸ್ಥಾಪಿಸಲು ಯೋಜಿಸಿರುವ ನಮ್ಮ ಮೊದಲ ಥರ್ಮಲ್ ಯೋಜನೆಗೆ ಕೆಲವೇ ದಿನಗಳ ಹಿಂದೆ ಭಾರತದ ರಾಷ್ಟ್ರಪತಿಯವರು ಅಸ್ತಿಭಾರವನ್ನು ಹಾಕಿದ್ದಾರೆ ಈ ವಿದ್ಯುತ್ ಯೋಜನೆಗಳಿಗೆ ಅಗತ್ಯವಾದಂಥ ಭಾರಿ ಪ್ರಮಾಣದ ಹಣವಿನಿಯೋಗವು ಒಂದು ದೊಡ್ಡ ಸಮಸ್ಯೆಯಾಗಿದೆ. ಆದರೆ ನಮ್ಮ ಸರ್ಕಾರವು ಆವುಗಳನ್ನು ಸಾಧ್ಯವಾದಷ್ಟು ಬೇಗನೆ ಪೂರ್ಣಗೊಳಿಸಲು ಎಲ್ಲ ಅಗತ್ಯವಾದ ಕ್ರಮಗಳನ್ನೂ ಕೈಗೊಳ್ಳುತ್ತದೆ. ಕೇಂದ್ರ ಸರ್ಕಾರವು ನಮ್ಮ ಈ ತೊಂದರೆಗಳನ್ನು ಸಂಪೂರ್ಣವಾಗಿ ಅರಿತು ಈ ಯೋಜನೆಗಳನ್ನು ಕಾರ್ಯಗತಗೊಳಿಸಲು ಸಹಾಯ ನೀಡುವುದೆಂಬ ಭರವಸೆ ನಮಗಿದೆ.

ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿಶ್ವಬ್ಯಾಂಕಿನ ನೆರವನ್ನು ಪಡೆಯಲಾಗಿದ್ದು ಯೋಜನೆ ಪೂರ್ಣಗೊಂಡಾಗ ಏರಡು ಮಿಲಿಯನ್ ಎಕರೆಗಳಷ್ಟು ಪ್ರದೇಶಕ್ಕೆ ನೀರೊದಗುವುದು. ಇದು ರಾಜ್ಯದ ಅತಿ ದೊಡ್ಡ ಯೋಜನೆಗಳ ಪೈಕಿ ಒಂದಾಗಿದ್ದು ಮೊದಲ ಹಂತವನ್ನು ಐದು ವರ್ಷಗಳಲ್ಲಿ ಪೂರ್ಣಗೊಳಿಸಬೇಕಾಗಿದೆ. ಇಷ್ಟರವರೆಗೆ ಯೋಜನೆಯು ನಿಶ್ಚಿತ ರೀತಿಯಲ್ಲಿ ಮುಂದುವರಿಯುತ್ತಿದೆ. ಮೊದಲ ಹಂತದ ಕಾರ್ಯವನ್ನು ಶೀಘ್ರವಾಗಿ ಪೂರ್ಣಗೊಳಿಸುವುದೇ ಅಲ್ಲದೆ, ಎರಡನೆ ಹಂತದ ಕಾರ್ಯವನ್ನೂ ಸಕಾಲದಲ್ಲಿ ಪ್ರಾರಂಭಿಸಬೇಕೆಂಬುದು ನಮ್ಮ ಸರ್ಕಾರದ ಆಶಯವಾಗಿದೆ.

ಕಾವೇರಿ ಜಲಾನಯನ ಯೋಜನೆಗಳಾದ ಹೇಮಾವತಿ, ಸಾರಂಗಿ, ಕಬಿನಿ ಯೋಜನೆಗಳು ಮತ್ತು ಕೃಷ್ಣರಾಜಸಾಗರ ಅಣೆಕಟ್ಟಿನ ಬಲದಂಡೆ ಕಾಲುವೆ ಹಾಗೂ ವಿಶ್ವೇಶ್ವರಯ್ಯ ಕಾಲುವೆಯ ನವೀಕರಣ

ಯೋಜನೆಗಳು ಆದಷ್ಟು ಬೇಗನೆ ಪೂರ್ಣವಾಗುವುದನ್ನು ಕಾಣಲು ನಾವು ಕಾತುರರಾಗಿದ್ದೇವೆ. ಅಚ್ಚುಕಟ್ಟು ಪ್ರದೇಶದ ಅಭಿವೃದ್ಧಿಯನ್ನು ಶ್ರದ್ಧೆಯಿಂದ ಮತ್ತು ಸಕಾಲದಲ್ಲಿ ಕೈಗೊಳ್ಳದಿದ್ದರೆ ಭೂರೀ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳಿಗೆ ಹಿಂದಿನ ಹಲವು ವರ್ಷಗಳಿಂದ ಮಾಡಿದ ದೊಡ್ಡ ಪ್ರಮಾಣದ ವೆಚ್ಚವು ವ್ಯರ್ಥವಾಗಬಹುದು. ಅಚ್ಚುಕಟ್ಟು ಪ್ರದೇಶಗಳ ಯೋಗ್ಯ ಅಭಿವೃದ್ಧಿಗಾಗಿ ಹೊರಡಿಸಿದ ಆಧ್ಯಾದೇಶದ ಮೂಲಕ ಶಾಸನಬದ್ಧ ಪ್ರಾಧಿಕಾರಗಳನ್ನು ರಚಿಸಲಾಗಿತ್ತು. ಆ ಆಧ್ಯಾದೇಶದ ಬದಲಾಗಿ ಒಂದುವಿಧೇಯಕವನ್ನು ನಿಮ್ಮ ಮುಂದಿಡಲಾಗಿದೆ.

ಸಣ್ಣ ನೀರಾವರಿಗೂ ವಿಶೇಷ ಗಮನ ನೀಡಬೇಕಾಗಿದೆ. ಭಾರಿ ನೀರಾವರಿ ಯೋಜನೆಗಳ ಮೇರೆಗೆ ಕಾಮಗಾರಿಗಳನ್ನು ಕೈಕೊಳ್ಳಲಾಗದಿರುವ ಪ್ರದೇಶಗಳಲ್ಲಿ ಅವುಗಳನ್ನು ಕೈಕೊಳ್ಳಬಹುದು. ನಮ್ಮ ಸರ್ಕಾರವು, ಈಗ ಮುಂದುವರಿಯುತ್ತಿರುವ ಸಣ್ಣ ನೀರಾವರಿ ಕಾಮಗಾರಿಗಳನ್ನು ಬೇಗ ಪೂರ್ಣಗೊಳಿಸಲು ಮತ್ತು ಅಗತ್ಯವಾದೆಡೆಗಳಲ್ಲೆಲ್ಲಾ ಹೊಸ ಕಾಮಗಾರಿಗಳನ್ನು ಪ್ರಾರಂಭಿಸಲು ಆಸಕ್ತಿ ಹೊಂದಿದೆ.

ಭೂಸುಧಾರಣೆಯನ್ನು ಕಾರ್ಯಗತಗೊಳಿಸುವುದರಲ್ಲಿ ಸಾಕಷ್ಟು ಪ್ರಗತಿ ಯಾಗಿದೆ. ಈ ಕಾರ್ಯಕ್ರಮವನ್ನು ಶೀಘ್ರವಾಗಿ ಕಾರ್ಯಗತಗೊಳಿಸಬೇಕಾದ ಅಗತ್ಯವಿರುವ ಜಿಲ್ಲೆಗಳಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯ ಭೂ ನ್ಯಾಯ ಮಂಡಲಿಗಳನ್ನು ರಚಿಸುವ ಮೂಲಕ, ಸಮಗ್ರ ಹಾಗೂ ಪರಿಣಾಮಕಾರಿಯಾಗಿ ಈ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲು ನಮ್ಮ ಸರ್ಕಾರವು ಬದ್ಧವಾಗಿದೆ.

20 ಅಂಶಗಳ ಆರ್ಥಿಕ ಕಾರ್ಯಕ್ರಮವನ್ನು ಈ ಹಿಂದೆ ಜಾರಿಗೆ ತಂದುದಕ್ಕಿಂತಲೂ ಹೆಚ್ಚಿನ ಹುರುಪಿನಿಂದ ಕಾರ್ಯರೂಪಕ್ಕೆ ತರುವುದನ್ನು ನಮ್ಮ ಸರ್ಕಾರ ಮುಂದುವರಿಸುತ್ತದೆ. ನಮ್ಮ ಸರ್ಕಾರವು ಹೆಚ್ಚುವರಿ ಭೂಮಿಯ ಹಂಚಿಕೆಗೆ ಆದ್ಯಗಮನ ಕೊಡುತ್ತದೆ, ಹಾಗೂ ಹೆಚ್ಚುವರಿ ಭೂಮಿಯ ಹಂಚಿಕೆಯಾದವರಿಗೆ ಶೀಘ್ರವಾಗಿ ಭೂ-ಒಡೆತನದ ಹಕ್ಕು ದೊರೆಯುವಂತೆ ಮಾಡುತ್ತದೆ. ನಗರ ಭೂ-ಮಿತಿ ಯೋಜನೆಯಲ್ಲಿ ಸುಧಾರಣೆ ಮಾಡುವ ಮೂಲಕ ಹಾಗೂ ಅಧಿನಿಯಮದ ಉಪಬಂಧೆಗಳನ್ನು ಕಟ್ಟು ನಿಟ್ಟಾಗಿ ಜಾರಿಗೆ ತರುವ ಮೂಲಕ ನಗರ ಭೂಮಿತಿ ಕಾನೂನನ್ನು ಕಾರ್ಯಗತಗೊಳಿಸುವಾಗ ತಲೆದೋರುವ ಅಡ್ಡಿ ಆಡಚಣೆಗಳನ್ನು ನಿವಾರಿಸಲು ನಮ್ಮ ಸರ್ಕಾರ ತುಂಬ ಆಸಕ್ತಿಹೊಂದಿದೆ.

ನಪರ್ಮ ರಾಜ್ಯವು ಹಳ್ಳಿ, ಪಟ್ಟಣ ಹಾಗೂ ನಗರಗಳ ನಡುವೆ ಸಂಪರ್ಕ ಕಲ್ಪಿಸುವ ರಸ್ತೆಗಳು ಮತ್ತು ಸೇತುವೆಗಳನ್ನು ನಿರ್ಮಿಸುವುದರಲ್ಲಿ ಇತರ ಅನೇಕ ರಾಜ್ಯಗಳಿಗಿಂತ ಮುಂದಿದ್ದರೂ ಮುಖ್ಯವಾಗಿ, ಹಣದ ಕೊರತೆಯು ನಿಮಿತ್ತ ಈ ರಸ್ತೆಗಳ ಗುಣಮಟ್ಟವನ್ನು ಸುಧಾರಿಸುವ ಕಾರ್ಯಕ್ರಮವು ಮಂದಗತಿಯಲ್ಲಿ ಸಾಗಿದೆ, ನಮ್ಮ ರಸ್ತೆಗಳ ಗುಣಮಟ್ಟವನ್ನು ಸುಧಾರಿಸುವ ಮತ್ತು ಅಗತ್ಯವಿರುವಲ್ಲೆಲ್ಲ ಸೇತುವೆಗಳನ್ನು ನಿರ್ಮಿಸುವುದರ ಬಗ್ಗೆ ನಮ್ಮ ಸರ್ಕಾರವು ವಿಶೇಷ ಗಮನ ನೀಡುತ್ತದೆ.

ನಮ್ಮ ರಾಜ್ಯದಲ್ಲಿರುವ ಎಲ್ಲ ಪ್ರಮುಖ ರೈಲು ಮಾರ್ಗಗಳನ್ನು ಬ್ರಾಡ್‌ಗೇಜುಗಳಾಗಿ ಪರಿವರ್ತಿಸಲು ಆಸಕ್ತರಾಗಿದ್ದೇವೆ. ಬೆಂಗಳೂರು-ಗುಂತಕಲ್ಲು ಮಾರ್ಗದ ಕಾರ್ಯವನ್ನು ಈಗಾಗಲೇ ಕೈಕೊಂಡಿರುವುದಾದರೂ ಅದರ ನಿರ್ವಹಣೆಯನ್ನು ತ್ವರಿತಗೊಳಿಸಬೇಕಾಗಿದೆ ಬೆಂಗಳೂರು-ಮೈಸೂರು ಮಾರ್ಗವನ್ನು ಬ್ರಾಡ್‌ಗೇಜಾಗಿ ಪರಿವರ್ತಿಸುವ ಕಾರ್ಯವನ್ನು ಬೇಗನೆ ಕೈಗೊಳ್ಳಬೇಕಾಗಿದೆ. ಬೆಂಗಳೂರು-ಮಿರಜ್ ರೈಲ್ವೆ ಮಾರ್ಗವನ್ನು ಬ್ರಾಡ್‌ಗೇಜಾಗಿ ಪರಿವರ್ತಿಸುವ ಬಗ್ಗೆ ಮೊದಲ ಆದ್ಯತೆ ನೀಡಬೇಕೆಂದು ಭಾರತ ಸರ್ಕಾರವನ್ನು ನಾವು ಆಗ್ರಹ ಪಡಿಸುತ್ತೇವೆ.

ದುರದೃಷ್ಟವಶಾತ್, ಇಷ್ಟರೊಳಗಾಗಿಯೇ ಪ್ರಾರಂಭವಾಗಬೇಕಾಗಿದ್ದ ವಿಜಯನಗರ ಉಕ್ಕಿನ ಕಾರ್ಖಾನೆಯ ಕೆಲಸ ಮುಂದುವರಿಯದೆ ಬಹಳಷ್ಟು ಹಿಂದೆ ಉಳಿದಿದೆ. ನಮ್ಮ ಸರ್ಕಾರವು ಈ ಪ್ರಮುಖ ಯೋಜನೆಗೆ ಗಣನೀಯ ಪ್ರಾಮುಖ್ಯತೆಯನ್ನು ನೀಡುತ್ತದೆ ಹಾಗೂ ಇನ್ನೂ ಹೆಚ್ಚಿನ ಕಾಲ ವಿಳಂಬಕ್ಕೆ ಎಡೆಕೊಡದೆ ಈ ಕೆಲಸವನ್ನು ಪಾರಂಭಿಸುವಂತೆ ಭಾರತ ಸರ್ಕಾರವನ್ನು ಒತ್ತಾಯಪಡಿಸುತ್ತದೆ.

ರಾಜ್ಯದಲ್ಲಿನ ಎಲ್ಲ ಮಕ್ಕಳಿಗೂ ಶಾಲಾ ಸೌಲಭ್ಯವನ್ನು ನಾವು ಒದಗಿಸಿದ್ದಾಗ್ಯೂ ಕಡ್ಡಾಯ ಶಿಕ್ಷಣ-ವಯೋ ಗುಂಪಿನ ಅನೇಕ ಮಕ್ಕಳು ಶಾಲೆಗಳಿಗೆ ಇನ್ನೂ ಸೇರಿಲ್ಲ. ಸರ್ಕಾರವು ಈ ಸಮಸ್ಯೆಗೆ ವಿಶೇಷ ಗಮನ ನೀಡುತ್ತದೆ ಮತ್ತು ಕಡ್ಡಾಯ ಶಿಕ್ಷಣ-ವಯೋ ಗುಂಪಿನ ನೂರಕ್ಕೆ ನೂರರಷ್ಟು ಮಕ್ಕಳು ಶಾಲೆಗೆ ಸೇರುವಂತೆ ನಾವು ಕ್ರಮ ಕೈಗೊಳ್ಳುತ್ತೇವೆ. ಸುಶಿಕ್ಷಿತ ಯುವಕರು ಲಾಭದಾಯಕ ಉದ್ಯೋಗ

ವನ್ನು ಆರಿಸಿಕೊಳ್ಳುವಂತೆ ಅವರಿಗೆ ತರಬೇತಿ ನೀಡುವ ಮತ್ತು ಕಾಲೇಜುಗಳಲ್ಲಿ ಪ್ರವೇಶಕ್ಕೆ ಆಗುವ ಅನಗತ್ಯ ಒತ್ತಡವನ್ನು ಕಡಿಮೆ ಮಾಡುವ ಎರಡು ಉದ್ದೇಶಗಳನ್ನೂ ಈಡೇರಿಸುವಂತೆ ಶಿಕ್ಷಣವನ್ನು ವೃತ್ತಿ ಪ್ರಧಾನವನ್ನಾಗಿ ಮಾಡುವುದರ ದಿಸೆಯಲ್ಲಿ ನಮ್ಮ ಸರ್ಕಾರದವರು ತಮ್ಮ ಪ್ರಯತ್ನವನ್ನು ಮುಂದುವರಿಸುತ್ತಾರೆ.

ಪ್ರತಿಭಾವಂತ ಯುವ ಕ್ರೀಡಾಪಟುಗಳಿಗೆ ಅದರಲ್ಲೂ ಮುಖ್ಯವಾಗಿ ಗ್ರಾಮಾಂತರ ಯುವಜನರಿಗೆ ಪ್ರೋತ್ಸಾಹ ನೀಡಲು ನಮ್ಮ ಸರ್ಕಾರ ಕಾತರದಿಂದಿದೆ. ಈ ದಿಶೆಯಲ್ಲಿ ಹೆಚ್ಚು ಹೆಚ್ಚು ಸೌಲಭ್ಯಗಳನ್ನೊದಗಿಸಲು ಯೋಜನೆಗಳನ್ನು ರೂಪಿಸಲಿದೆ.

ತಲೆತಲಾಂತರಗಳಿಂದಲೂ ಜೀತದಾಳುಗಳಾಗಿದ್ದ ಕಾರ್ಮಿಕರನ್ನು ಗುಲಾಮಗಿರಿಯಿಂದ ಬಿಡಿಸಲು ಕಳೆದ ಕೆಲವು ವರ್ಷಗಳಿಂದಲೂ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೆ, ಈ ಜೀತಮುಕ್ತ ಕಾರ್ಮಿಕರಿಗೆ ಪುನರ್ವಸತಿ ಕಲ್ಪಿಸುವಲ್ಲಿ ಸಾಕಷ್ಟು ಪ್ರಗತಿ ಸಾಧಿಸಲು ನಮಗೆ ಸಾಧ್ಯವಾಗಿಲ್ಲ. ಜೀತಮುಕ್ತ ಕಾರ್ಮಿಕರಿಗೆ ಪರಿಣಾಮಕಾರಿಯಾಗಿ ಪುನರ್ವಸತಿ ಕಲ್ಪಿಸುವಂಥ ಹಾಗೂ ದೇಶದ ಆರ್ಥಿಕ ಪ್ರಗತಿಗೆ ಅವರೂ ಮುಕ್ತ ಸೇವೆ ಸಲ್ಲಿಸಲು ಸಹಾಯಕವಾಗುವಂಥ ಯೋಜನೆಗಳನ್ನು ನಮ್ಮ ಸರ್ಕಾರ ರೂಪಿಸುತ್ತಿದೆ.

ಹರಿಜನ ಗಿರಿಜನರ, ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ ಹಾಗೂ ಸಮಾಜದ ಇತರ ದುರ್ಬಲ ವರ್ಗಗಳ ಶ್ರೇಯೋಭಿವೃದ್ಧಿಗಾಗಿ ಗಮನ ಕೊಡುವ ವಿಷಯದಲ್ಲಿ ಕರ್ನಾಟವು ಯಾವಾಗಲೂ ಒಂದು ಹೆಜ್ಜೆ ಮುಂದೆ. ಈಗಿರುವ ಯೋಜನೆಗಳನ್ನು ಮುಂದುವರಿಸುವುದೇ ಅಲ್ಲದೆ ಅವುಗಳನ್ನು ಬಲಪಡಿಸಲಾಗುವುದು.

ನಮ್ಮ ಸರ್ಕಾರಕ್ಕೆ ಸರ್ಕಾರಿ ನೌಕರರ ಕಲ್ಯಾಣದ ವಿಷಯದಲ್ಲಿ ವಿಶೇಷ ಆಸಕ್ತಿಯಿದೆ. ಉತ್ತಮ ವೇತನ ಶ್ರೇಣಿಯನ್ನು ಹಾಗೂ ಕೆಲವು ಸೌಲಭ್ಯಗಳನ್ನೊದಗಿಸಲು ಇತ್ತೀಚಿನ ವರ್ಷಗಳಲ್ಲಿ ಹಲವಾರು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ವಸತಿಯನ್ನೊದಗಿಸುವುದು, ಅದರಲ್ಲೂ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ವಸತಿಯನ್ನೊದಗಿಸುವುದು ಸರ್ಕಾರಿ ನೌಕರರ ಒಂದು ಪ್ರಮುಖ ಬೇಡಿಕೆಯಾಗಿದೆ. ರಾಜ್ಯದ ವಿವಿಧ ಭಾಗಗಳಲ್ಲಿ ಕೆಲಸ ಮಾಡುತ್ತಿರುವ ಕಡಿಮೆ ಸಂಬಳದ ನೌಕರರಿಗೆ ವಸತಿ ಸೌಕರ್ಯವನ್ನೊದಗಿಸುವ ವ್ಯಾಪಕ ಕಾರ್ಯಕ್ರಮವನ್ನು ಕೈಕೊಳ್ಳಲು ನಮ್ಮ ಸರ್ಕಾರ ಯೋಚಿಸುತ್ತಿದೆ. ಈ ಕೆಲಸವನ್ನು ಹಂತ ಹಂತವಾಗಿ ಕೈಕೊಳ್ಳಲು ವ್ಯಾಪಕ ಯೋಜನೆಯೊಂದನ್ನು ನಾವು ರೂಪಿಸಲಿದ್ದೇವೆ.

ಆಡಳಿತ ಹಾಗೂ ಜನತೆಯ ನಡುವೆ ಇನ್ನಷ್ಟು ನಿಕಟ ಹಾಗೂ ಮಧುರ ಬಾಂಧವ್ಯವನ್ನು ಏರ್ಪಡಿಸುವ ಸಲುವಾಗಿ ಸರ್ಕಾರದ ಎಲ್ಲ ಪಟ್ಟಗಳಲ್ಲೂ ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೆ ತರಲಾಗಿದೆ. ಸರ್ಕಾರದ ಈ ನಿರ್ಣಯವನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಸಲುವಾಗಿ ಈಗಾಗಲೇ ಕೆಲವು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ನಮ್ಮ ಕಚೇರಿಗಳಲ್ಲಿ ವ್ಯಾಪಕವಾಗಿ ಕನ್ನಡದ ಬಳಕೆಯಾಗಬೇಕಾದರೆ ನಾವು ಇನ್ನೂ ಹಲವಾರು ಕಾರ್ಯಕ್ರಮಗಳನ್ನು ಕೈಕೊಳ್ಳುವುದು ಅಗತ್ಯ. ರಾಜ್ಯ ಸರ್ಕಾರದ ಎಲ್ಲ ಕಚೇರಿಗಳಲ್ಲೂ ಹೆಚ್ಚು ಹೆಚ್ಚಾಗಿ ಕನ್ನಡದ ಬಳಕೆಯಾಗುವಂತೆ ಮಾಡಲು ನಮ್ಮ ಸರ್ಕಾರ ತೀವ್ರ ಕ್ರಮಗಳನ್ನು ಕೈಗೊಳ್ಳಲಿದೆ.

ಕಳೆದ ಶಾಸನ ಸಭೆಯ ಅಧಿವೇಶನದ ನಂತರ ಈ ಮುಂದಿನ ಅಧ್ಯಾದೇಶಗಳನ್ನು ಹೊರಡಿಸಲಾಗಿದೆ.

1. ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಮೂರನೇ ತಿದ್ದುಪಡಿ) ಅಧ್ಯಾದೇಶ, 1979
2. ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಅಧ್ಯಾದೇಶ, 1979
3. ಕರ್ನಾಟಕ ಲೋಕಾಯುಕ್ತ (ನಿರಸನ) ಅಧ್ಯಾದೇಶ, 1979
4. ಕರ್ನಾಟಕ ಲೋಕಾಯುಕ್ತ (ಎರಡನೇ ತಿದ್ದುಪಡಿ) ಅಧ್ಯಾದೇಶ, 1979
5. ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಖಾಲಿ ಭೂಮಿಗಳ (ಪರಭಾರೆ ನಿಷೇಧ) (ತಿದ್ದುಪಡಿ) (ನಿರಸನ) ಅಧ್ಯಾದೇಶ, 1979

6. ಕರ್ನಾಟಕ ವ್ಯವಸಾಯೋತ್ಪನ್ನ ಮಾರುಕಟ್ಟೆ (ವಿನಿಯಮನ) (ತಿದ್ದುಪಡಿ) ಅಧ್ಯಾದೇಶ, 1979

7. ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಖಾಲಿ ಭೂಮಿಗಳ (ಪರಭಾರೆನಿಷೇಧ) (ಎರಡನೆ) ತಿದ್ದುಪಡಿ) ಅಧ್ಯಾದೇಶ, 1979

8. ಕರ್ನಾಟಕ ವ್ಯವಸಾಯೋತ್ಪನ್ನ ಮಾರುಕಟ್ಟೆ (ವಿನಿಯಮನ) (ಎರಡನೇ ತಿದ್ದುಪಡಿ) ಅಧ್ಯಾದೇಶ, 1979

9. ಮಂಗಳೂರು ಪೋರ್ಟ್‌ಟ್ರಸ್ಟ್ (ನಿರಸನ) ಅಧ್ಯಾದೇಶ, 1979

10. ಕರ್ನಾಟಕ ಗ್ರಾಮ ಪಂಚಾಯತಿಗಳ ಮತ್ತು ಸ್ಥಳೀಯ ಮಂಡಲಿಗಳ (ತಿದ್ದುಪಡಿ) ಅಧ್ಯಾದೇಶ, 1979

11. ಕರ್ನಾಟಕ ಋಣ ವಿಮೋಚನಾ ಅಧ್ಯಾದೇಶ, 1979

12. ಕರ್ನಾಟಕ ಸಹಕಾರಿ ಸಂಘಗಳ (ಎರಡನೇ ತಿದ್ದುಪಡಿ) ಅಧ್ಯಾದೇಶ, 1979

13. ಕರ್ನಾಟಕ ಅಚ್ಚುಕಟ್ಟು ಪ್ರದೇಶಗಳ ಅಭಿವೃದ್ಧಿ (ಎರಡನೇ) ಅಧ್ಯಾದೇಶ 1979

14. ಕರ್ನಾಟಕ ಸ್ಟ್ಯಾಂಪು (ಎರಡನೇ ತಿದ್ದುಪಡಿ) ಅಧ್ಯಾದೇಶ, 1979

15. ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧ್ಯಾದೇಶ, 1979

16. ಕರ್ನಾಟಕ ರೇಷ್ಮೆತಳಿ, ರೇಷ್ಮೆಗೂಡು ಮತ್ತು ರೇಷ್ಮೆನೂಲು (ಎರಡನೇ ತಿದ್ದುಪಡಿ) ಅಧ್ಯಾದೇಶ, 1979

17. ಕರ್ನಾಟಕ ಭೂ ಸುಧಾರಣಾ (ಎರಡನೇ ತಿದ್ದುಪಡಿ) ಅಧ್ಯಾದೇಶ, 1979

18. ಮಂಗಳೂರು ಪೋರ್ಟ್‌ಟ್ರಸ್ಟ್ (ನಿರಸನ) (ತಿದ್ದುಪಡಿ) ಅಧ್ಯಾದೇಶ, 1979

ಈ ಅಧ್ಯಾದೇಶಗಳನ್ನು ವಿಧಾನ ಮಂಡಲದ ಮುಂದೆ ಇಡಲಾಗುವುದು. ಅವಶ್ಯವೆನಿಸಿದಾಗ, ಈ ಅಧ್ಯಾದೇಶಗಳ ಬದಲಾಗಿ ವಿಧೇಯಕಗಳನ್ನು ಆದಷ್ಟು ಬೇಗನೆ ವಿಧಾನ ಮಂಡಲದ ಮುಂದೆ ಮಂಡಿಸಲು ನಮ್ಮ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ರಾಜ್ಯದ ಜನತೆ ನಿಮ್ಮಲ್ಲಿ ಅಪಾರ ವಿಶ್ವಾಸ ಮತ್ತು ನಂಬಿಕೆಯನ್ನು ವ್ಯಕ್ತ ಪಡಿಸಿದ್ದಾರೆಂಬುದನ್ನು ಮತ್ತು ನಿಮ್ಮಿಂದ ಅವರು ಹೆಚ್ಚಿನ ಕಾರ್ಯತತ್ಪರತೆಯನ್ನು ನಿರೀಕ್ಷಿಸುತ್ತಾರೆ ಎಂಬುದನ್ನು ನಿಮಗೆ ನಾನು ಪುನಃ ಹೇಳಬೇಕಾಗಿಲ್ಲ. ನಿಮ್ಮ ಅತ್ಯಮೂಲ್ಯ ಸಮಯದ ಪ್ರತಿಯೊಂದು ನಿಮಿಷವನ್ನೂ ಜನತೆಯ ಅನುಕೂಲಕ್ಕಾಗಿ ರಚನಾತ್ಮಕವಾಗಿ ವಿನಿಯೋಗಿಸಬೇಕೆಂಬ ಗುರುತರ ಜವಾಬ್ದಾರಿಯ ಅರಿವು ನಿಮಗೆ ಇದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ತಿಳಿವಳಿಕೆ ಮತ್ತು ಸದ್ವಿವೇಕಗಳು ನಿಮ್ಮ ಪ್ರತಿಯೊಂದು ಚಿಂತನೆಯಲ್ಲಿ ನಿಮಗೆ ಸೂಕ್ತ ಮಾರ್ಗ ದರ್ಶನ ನೀಡಲಿ, ನಿಮ್ಮ ಸಕಲ ಪ್ರಯತ್ನಗಳಲ್ಲಿ ನಿಮಗೆ ಯಶಸ್ಸು ಲಭಿಸಲಿ ಎಂದು ಹಾರೈಸುತ್ತೇನೆ.